2316(1869) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು):- ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಕಡೂರು ಪಟ್ಟಣಕ್ಕೆ ಭದ್ರ ಡ್ಯಾಂನಿಂದ ಕುಡಿಯುವ ನೀರು ಪೂರೈಸುವ ಯೋಜನೆ ಈಗ ಯಾವ ಹಂತದಲ್ಲಿದೆ;

ಆ. 2005-06ನೇ ಸಾಲಿನಲ್ಲಿ ಈ ಯೋಜನೆಯ ಲಾಭ ಸಾರ್ವಜನಿಕರಿಗೆ ಸಿಗಲಿದೆಯೇ;

ಇ. ಈ ಯೋಜನೆಯ ಅಂದಾಜು ವೆಚ್ಚದ ಮೊತ್ತ ಎಷ್ಟು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಸರ್ವೆ ಕಾರ್ಯ ಮುಗಿದಿದ್ದು ಯೋಜನೆಯ ವಿನ್ಯಾಸ ಮತ್ತು ಅಂದಾಜು ತಯಾರಿಸಲಾಗುತ್ತಿದೆ.

ಆ) ಹೌದು

ಇ) ಅಂದಾಜು ಸುಮಾರು ರೂ. 36.00 ಕೋಟಿಗಳು.

2317(2788) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು):- ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಚಿಕ್ಕಮಗಳೂರು ಜಿಲ್ಲಾ ಕಡೂರು ಪುರಸಭೆಯಲ್ಲಿ ಅಸೆಸ್ಮೆಂಟ್ ನಂ:5601/114 ಅಕ್ರಮ ಕಟ್ಟಡ ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಕಟ್ಟಡಗಳ ವಿವರ ನೀಡುವುದು);

ಆ. ಬಂದಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆ;

ಇ. ಸದರಿ ಕಟ್ಟಡ ಕಟ್ಟಲು ಪರವಾನಿಗೆ ನೀಡಿದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ. ಅಕ್ರಮ ಕಟ್ಟಡದ ಬಗ್ಗೆ ಹಲವಾರು ಬಾರಿ ಸರ್ಕಾರದ ಗಮನ ಸೆಳೆದರೂ ಕಟ್ಟಡಗಳನ್ನು ತೆರವುಗೊಳಿಸಿರುವುದಿಲ್ಲಾ ತೆರವುಗೊಳಿಸದಿರಲು ಕಾರಣವೇನು?

ಶ್ರೀ ಎಸ್. ಆರ್. ಮೋರೆ (ಕೆ.ಯ.ಐ.ಡಿ.ಎಫ್.ಸಿ. ಸಚಿವರು):-

ಅ. ಹೌದು, ಶ್ರೀ. ಆರ್. ಎಂ. ಬಸವರಾಜು ಬಿನ್ ಮರುಳುಸಿದ್ಧಪ್ಪರವರು ಅ.ಸು: 5061/114ರ 25-30ರ ಅಡಿ ವಿಸ್ತೀರ್ಣದಲ್ಲಿ ಪುರಸಭೆಯ ಪರವಾನಗಿ ಇಲ್ಲದೆ ಅಕ್ರಮವಾಗಿ ಕಟ್ಟಡವನ್ನು ಕಟ್ಟುತ್ತಿದ್ದಾರೆ.

ಆ. ಕಡೂರು ಪುರಸಭೆಯಿಂದ ದಿನಾಂಕ: 19-11-2003ರಂದು ಕೆಲಸ ಮುಂದುವರೆಸದಂತೆ ತಡೆಯಾಜ್ಞೆ ನೀಡಿದೆ.

ಇ. ಕಡೂರು ಪುರಸಭೆಯಿಂದ ಕಟ್ಟಡ ಕಟ್ಟಲು ಪರವಾನಗಿ ನೀಡಿರುವುದಿಲ್ಲ. ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಈಗಾಗಲೇ ಪುರಸಭೆಯು ಇದರ ಬಗ್ಗೆ ಕ್ರಮವಹಿಸಿರುತ್ತಾರೆ.